## KARTET-2019 ರ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಸೂಚನೆಗಳು:

1. ಅಭ್ಯರ್ಥಿಯು ಪರೀಕ್ಷಾ ಪ್ರವೇಶ ಪತ್ರವನ್ನು **ದಿನಾಂಕ:25/09/2020** ರಿಂದ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಅಭ್ಯರ್ಥಿಯು ಪರೀಕ್ಷಾ ಪ್ರವೇಶ ಪತ್ರವನ್ನು ಸಾಕಷ್ಟು ಮುಂಚಿತವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ತಮಗೆ ಹಂಚಿಕೆಯಾಗಿರುವ ಪರೀಕ್ಷಾ ಕೇಂದ್ರದ ವಿಳಾಸವನ್ನು ತಿಳಿದು, ಕನಿಷ್ಠ ಒಂದು ದಿನ ಮುಂಚಿತವಾಗಿ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಸರಿಯಾದ ವಿಳಾಸವನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. (ವಿಶೇಷವಾಗಿ ಬೆಂಗಳೂರಿನಲ್ಲಿ ಪರೀಕ್ಷೆ ಬರೆಯುವ ಅಭ್ಯರ್ಥಿ)
3. ಪರೀಕ್ಷಾ ಕೇಂದ್ರದ ವಿಳಾಸಕ್ಕೆ ಸಂಬಂಧಿಸಿದಂತೆ ವಿವರ ಬೇಕಾದಲ್ಲಿ ತಾವು ಪರೀಕ್ಷೆ ಬರೆಯಲಿರುವ ಜಿಲ್ಲೆಯ KARTET-2019ರ ನೋಡಲ್ ಅಧಿಕಾರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ಪಡೆಯಬಹುದು. ನೋಡಲ್ ಅಧಿಕಾರಿಯ ದೂರವಾಣಿ ಸಂಖ್ಯೆ ವೆಬ್‌ಸೈಟ್‌ನಲ್ಲಿ ಲಭ್ಯವಿರಿಸಿದೆ.
4. ಅಭ್ಯರ್ಥಿಯು ಪರೀಕ್ಷಾ ಕೇಂದ್ರಕ್ಕೆ ಪ್ರತೀ ಅಧಿವೇಶನದ ಪರೀಕ್ಷಾ ಪ್ರಾರಂಭದ ಅವಧಿಗಿಂತ ಒಂದು ಗಂಟೆ ಮುಂಚಿತವಾಗಿ ಹಾಜರಿರುವುದು.
5. ಅಭ್ಯರ್ಥಿಯು ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಿದ ಕೂಡಲೇ 'ಆರೋಗ್ಯ ತಪಾಸಣಾ ಕೌಂಟರ್' ನಲ್ಲಿ ಆರೋಗ್ಯ ತಪಾಸಣೆಗೆ ಒಳಪಡುವುದು.
6. ಪರೀಕ್ಷೆಗೆ ಹಾಜರಾಗುವ ಪ್ರತಿ ಅಭ್ಯರ್ಥಿಯು ಕಡ್ಡಾಯವಾಗಿ ಮುಖಗವಸು (ಫೇಸ್ ಮಾಸ್ಕ್) ಧರಿಸಿರಬೇಕು.
7. ಪ್ರತಿ ಅಭ್ಯರ್ಥಿಯು ತನ್ನ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳುವುದು.
8. ಪ್ರತಿ ಅಭ್ಯರ್ಥಿಯು ತಮ್ಮದೇ ಆದ ನೀರಿನ ಬಾಟಲಿಗಳನ್ನು ತಪ್ಪದೇ ತರುವುದು.
9. ಅಭ್ಯರ್ಥಿಯು ಪರೀಕ್ಷಾ ಕೇಂದ್ರ ಹಾಗೂ ಕೊಠಡಿಯಲ್ಲಿ ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಕಾಯ್ದುಕೊಳ್ಳುವುದು.
10. ಪರೀಕ್ಷೆ ಪ್ರಾರಂಭವಾಗುವ 30 ನಿಮಿಷಗಳ ಮೊದಲು ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಗೆ ಪ್ರವೇಶವನ್ನು ನೀಡಲಾಗುವುದು.
11. ಕೊಠಡಿಯನ್ನು ಪ್ರವೇಶಿಸಿದ ನಂತರ, ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿರುವ ತಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಿರುವ ಡೆಸ್ಕ್‌ನಲ್ಲಿಯೇ ಕುಳಿತುಕೊಳ್ಳುವುದು.
12. ಯಾವುದೇ ಕಾರಣಕ್ಕೂ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರ ಅಥವಾ ಕೊಠಡಿಯ ಪಕ್ಕ, ಪರೀಕ್ಷೆಯ ಮೊದಲು ಅಥವಾ ನಂತರವಾಗಲಿ ಗುಂಪು ಸೇರುವಂತಿಲ್ಲ.
13. **ಪ್ರವೇಶ ಪತ್ರವಿಲ್ಲದ ಯಾವುದೇ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ. ಈ ಬಗ್ಗೆ ಯಾವುದೇ ವಿನಾಯಿತಿ ಇರುವುದಿಲ್ಲ.**
14. ಪ್ರವೇಶ ಪತ್ರದೊಂದಿಗೆ ಅಭ್ಯರ್ಥಿಗಳು ಪರೀಕ್ಷಾ ಕೊಠಡಿ ಪ್ರವೇಶಿಸುವುದು.
15. ಓ.ಎಂ.ಆರ್ ಹಾಳೆಯಲ್ಲಿ ಅಭ್ಯರ್ಥಿಯ ಅರ್ಜಿಯಲ್ಲಿನ ವಿವರಗಳು ಪೂರ್ವ ಮುದ್ರಿತವಾಗಿದ್ದು, ಅದು ತನ್ನದೇ ಓ.ಎಂ.ಆರ್ ಹಾಳೆ ಎಂಬುದನ್ನು ಅಭ್ಯರ್ಥಿಯು ಖಾತ್ರಿ ಪಡಿಸಿಕೊಳ್ಳುವುದು.
16. ಅಭ್ಯರ್ಥಿಯು ಪೂರ್ವ ಮುದ್ರಿತ ಓ.ಎಂ.ಆರ್ ಹಾಳೆಯಲ್ಲಿ ತಮ್ಮ ಅರ್ಜಿ ಸಂಖ್ಯೆ/ನೋಂದಣಿ ಸಂಖ್ಯೆಯನ್ನು ನಿಗದಿತ ಸ್ಥಳದಲ್ಲಿ ತುಂಬಿ ಶೇಡ್ ಮಾಡುವುದು ಹಾಗೂ ಈಗಾಗಲೇ ಓ.ಎಂ.ಆರ್ ಹಾಳೆಯಲ್ಲಿ

ಮುದ್ರಿತವಾಗಿರುವ ಅರ್ಜಿ ಸಂಖ್ಯೆ/ನೋಂದಣಿ ಸಂಖ್ಯೆ ಹಾಗೂ ತಾವು ಬರೆದಿರುವ ಅರ್ಜಿ ಸಂಖ್ಯೆ//ನೋಂದಣಿ ಸಂಖ್ಯೆ ಒಂದೇ ಎಂಬುದನ್ನು ಖಾತರಿ ಪಡಿಸಿಕೊಳ್ಳುವುದು.

17. ಪ್ರಶ್ನೆಪತ್ರಿಕೆ ಪುಸ್ತಿಕೆಯನ್ನು ಸ್ವೀಕರಿಸಿದ ನಂತರ ಅಭ್ಯರ್ಥಿಯು ತನ್ನ ಓ.ಎಂ.ಆರ್. ಹಾಳೆ ಸಂಖ್ಯೆ ಮತ್ತು ಪ್ರಶ್ನೆಪತ್ರಿಕೆ ಪುಸ್ತಿಕೆಗಳ ಕ್ರಮ ಸಂಖ್ಯೆ ಒಂದೇ ಆಗಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಒಂದು ವೇಳೆ ಬೇರೆ ಪ್ರಶ್ನೆಪತ್ರಿಕೆ ನೀಡಿದ್ದಲ್ಲಿ ತಮ್ಮ ಓ.ಎಂ.ಆರ್ ಸಂಖ್ಯೆಯಿರುವ ಪ್ರಶ್ನೆಪತ್ರಿಕೆ ಪುಸ್ತಿಕೆಯನ್ನು ಪಡೆದುಕೊಂಡ ನಂತರವೇ ಉತ್ತರಿಸಲು ಪ್ರಾರಂಭಿಸುವುದು.
18. ಓ.ಎಂ.ಆರ್ ಹಾಳೆಯ ಕೆಳಭಾಗದಲ್ಲಿ ನಿಗದಿಪಡಿಸಿದ ಚೌಕದಲ್ಲಿ ಅಭ್ಯರ್ಥಿಯು ತನ್ನ ಸಹಿ ಮಾಡಬೇಕು. ಸದರಿ ಸಹಿಯು ಆನ್‌ಲೈನ್ ಅರ್ಜಿಯಲ್ಲಿನ ಸಹಿಗೆ ಹೋಲಿಕೆಯಾಗಬೇಕು.
19. ಇದರೊಂದಿಗೆ ಎಡಗೈ ಹೆಬ್ಬೆರಳಿನ ಗುರುತನ್ನು ಸ್ಪಷ್ಟವಾಗಿ ಒತ್ತಬೇಕು. ನಂತರ ಕೊಠಡಿ ಮೇಲ್ವಿಚಾರಕರಿಂದ ಓ.ಎಂ.ಆರ್ ಹಾಳೆಯಲ್ಲಿ ಸಹಿಯನ್ನು ಪಡೆದುಕೊಳ್ಳಬೇಕು.
20. **ಅಭ್ಯರ್ಥಿಯ ಸಹಿ, ಹೆಬ್ಬೆಟ್ಟಿನ ಗುರುತು ಹಾಗೂ ಕೊಠಡಿ ಮೇಲ್ವಿಚಾರಕರ ಸಹಿ ಇಲ್ಲದಿರುವ ಓ.ಎಂ.ಆರ್ ಉತ್ತರ ಪತ್ರಿಕೆಗಳನ್ನು ಯಾವುದೇ ಕಾರಣಕ್ಕೂ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.**
21. ನಾಮಯಾದಿ(Nominal Roll)ಯಲ್ಲಿ ಅಭ್ಯರ್ಥಿಯು ತಮ್ಮ ಹೆಸರಿನ ಮುಂದೆಯೇ ಸಹಿ ಮಾಡಬೇಕು ಹಾಗೂ ಎಡಗೈ ಹೆಬ್ಬೆರಳಿನ ಗುರುತನ್ನು ನಿಗಧಿತ ಸ್ಥಳದಲ್ಲಿ ಸ್ಪಷ್ಟವಾಗಿ ಒತ್ತಬೇಕು.
22. ನಿಗಧಿತ ಅವಧಿಗೆ (ಪತ್ರಿಕೆ 1 –9.30AM ಹಾಗೂ ಪತ್ರಿಕೆ 2 – 2.00PM) ಪರೀಕ್ಷೆ ಬರೆಯಲು ಪ್ರಾರಂಭಿಸುವುದು.
23. ಪರೀಕ್ಷಾ ಬೆಲ್ ನಂತರ ಪತ್ರಿಕೆ 1 – 9.30AM ಹಾಗೂ ಪತ್ರಿಕೆ 2 – 2.00PM) ಪರೀಕ್ಷಾ ಕೇಂದ್ರಕ್ಕೆ ಬರುವ ಯಾವುದೇ ಅಭ್ಯರ್ಥಿಯ ಪ್ರವೇಶಕ್ಕೆ ಅವಕಾಶವಿರುವುದಿಲ್ಲ.
24. ಅಭ್ಯರ್ಥಿಯು ಪರೀಕ್ಷಾ ಗೌಪ್ಯತೆಗೆ ಹಾಗೂ ನಿಯಮಗಳಿಗೆ ಚ್ಯುತಿ ಬಾರದಂತೆ ಪರೀಕ್ಷೆ ಬರೆಯುವುದು.
25. ಅಭ್ಯರ್ಥಿಯು ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವಾಗ ನಾಮಿನಲ್ ರೋಲ್‌ನಲ್ಲಿ ಕಡ್ಡಾಯವಾಗಿ ಎರಡನೇ ಬಾರಿ ಸಹಿ ಮಾಡುವುದು.
26. ಹಾಗೆ ಎರಡನೇ ಬಾರಿ ಸಹಿ ಮಾಡದ ಪಕ್ಷದಲ್ಲಿ, ಅಭ್ಯರ್ಥಿಯು ತನ್ನ ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಸಲ್ಲಿಸಿಲ್ಲ ಎಂದು ಭಾವಿಸಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. ಇದಕ್ಕೆ ಸ್ವತಃ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗುತ್ತಾರೆ.
27. ಅಭ್ಯರ್ಥಿಯು ಓ.ಎಂ.ಆರ್ ಉತ್ತರಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸಿದ ನಂತರವೇ ಕಾರ್ಬನ್‌ಲೆಸ್ ಪ್ರತಿಯನ್ನು ಮತ್ತು ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ಪರೀಕ್ಷಾ ಕೊಠಡಿಯಿಂದ ನಿರ್ಗಮಿಸಬಹುದು.

## ಕೋವಿಡ್–19 ಸೋಂಕಿತ ಅಭ್ಯರ್ಥಿಗಳಿಗೆ ಸೂಚನೆಗಳು:

28. ಕೋವಿಡ್–19 ಪಾಸಿಟಿವ್ ಅಭ್ಯರ್ಥಿಗಳಿಗೆ ಜಿಲ್ಲಾ ಕೋವಿಡ್ ಕೇರ್ ಸೆಂಟರ್‌ನಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗುತ್ತದೆ. ಕೋವಿಡ್–19 ಪಾಸಿಟಿವ್ ಅಭ್ಯರ್ಥಿ ತಾಲ್ಲೂಕು ಕೋವಿಡ್ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ, ಜಿಲ್ಲಾ ಕೋವಿಡ್–19 ಕೇರ್ ಸೆಂಟರ್‌ನಲ್ಲಿಯೇ ಪರೀಕ್ಷೆ ಬರೆಯಬೇಕು. ಈ ಸಂಬಂಧ ಅಭ್ಯರ್ಥಿಯು ಜಿಲ್ಲಾ ಕೋವಿಡ್–19 ಕೇರ್ ಸೆಂಟರ್‌ಗೆ ಸಂಚರಿಸಲು ಅದಕ್ಕಾಗಿ ನಿಗದಿ ಪಡಿಸಿದ ಅಂಬುಲೆನ್ಸ್ (108)ನ್ನು ಬಳಸತಕ್ಕದ್ದು.
29. ಕೋವಿಡ್–19ರ ಪಾಸಿಟಿವ್ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲು ಉಪನಿರ್ದೇಶಕರು(ಆಡಳಿತ) ಸಾಕಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ

ಕೋವಿಡ್–19 ರ ಪಾಸಿಟಿವ್ ಅಭ್ಯರ್ಥಿಗಳು KARTET–2019 ಪರೀಕ್ಷೆ ಬರೆಯಲು ಅಪೇಕ್ಷಿಸಿದ್ದಲ್ಲಿ , ಅಭ್ಯರ್ಥಿಯು ಕೋವಿಡ್–19 ರ ಪಾಸಿಟಿವ್ ಪರಿಸ್ಥಿತಿಯ ಬಗ್ಗೆ, ಎರಡು ದಿನ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ ತಿಳಿಸತಕ್ಕದ್ದು.

30. ಕೋವಿಡ್–19 ಸೋಂಕಿತ ಅಭ್ಯರ್ಥಿಯು ಪರೀಕ್ಷೆ ಬರೆಯಲು ಇಚ್ಚಿಪಟ್ಟಲ್ಲಿ, ಆತನ/ಆಕೆಯ ಆರೋಗ್ಯ ಸುಸ್ಥಿತಿಯಲ್ಲದೆಯೆಂದು, ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ವನ್ನು ಕಡ್ಡಾಯವಾಗಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರಿಗೆ ಕೋವಿಡ್–19 ಸೋಂಕಿತ ಅಭ್ಯರ್ಥಿಗಳು ಸಲ್ಲಿಸತಕ್ಕದ್ದು.

31. ಮನೆಯಲ್ಲಿಯೇ ಐಸೋಲೇಶನ್‌ನಲಿರುವ(Isolation) ಕೋವಿಡ್–19 ಪಾಸಿಟಿವ್ ಅಭ್ಯರ್ಥಿ KARTET–2019 ಪರೀಕ್ಷೆ ಬರೆಯಲು ಅಪೇಕ್ಷಿಸಿದ್ದಲ್ಲಿ, ಅಂತಹ ಅಭ್ಯರ್ಥಿಯ ಆರೋಗ್ಯ ಸುಸ್ಥಿತಿಯಲ್ಲಿದೆಯೆಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿದ್ದಲ್ಲಿ ಮಾತ್ರ, ಆ ಅಭ್ಯರ್ಥಿಗಳಿಗೆ ಜಿಲ್ಲಾ ಕೋವಿಡ್ ಕೇರ್ ಸೆಂಟರ್‌ನಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗುವುದು.

32. ಅಭ್ಯರ್ಥಿ ಪರೀಕ್ಷೆ ತೆಗೆದುಕೊಳ್ಳಲು ತಂದೆ/ತಾಯಿ/ಪೋಷಕರು ಒಂದು **"ಅಪಾಯ ಒಪ್ಪಿಗೆ"** ಪತ್ರವನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ನೀಡತಕ್ಕದು.

33. ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಟ್ಟತಂಹ ಕೋವಿಡ್–19 ಪಾಸಿಟಿವ್ ಇರುವ ಅಭ್ಯರ್ಥಿಯು ಎಲ್ಲಾ ಸಮಯದಲ್ಲಿಯೂ ಎನ್–95 ಮಾಸ್ಕ್‌ನ್ನು ಕಡ್ಡಾಯವಾಗಿ ಧರಿಸುವುದು.

## ಸಾಮಾನ್ಯ ಸೂಚನೆಗಳು

34. ಅಭ್ಯರ್ಥಿಯು ತನ್ನ ಪ್ರವೇಶ ಪತ್ರದಲ್ಲಿ ನಮೂದಿಸಿರುವ ವಿಷಯ ಹಾಗೂ ಮಾಧ್ಯಮದ ಪ್ರಶ್ನೆಪತ್ರಿಕೆಯನ್ನೇ ಉತ್ತರಿಸುವುದು ಕಡ್ಡಾಯವಾಗಿದೆ.

35. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಒಮ್ಮೆ ಬರೆದಿರುವುದನ್ನು ಪುನಃ ಬದಲಾಯಿಸುವುದು, ಚಿತ್ತು ಮಾಡುವುದು, ಬಿಳಿ ಫ್ಲೂಯಿಡ್ ಬಳಸುವುದನ್ನು, ಬ್ಲೇಡಿನಿಂದ ವಿರೂಪಗೊಳಿಸುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

36. ಓ.ಎಂ.ಆರ್ ಉತ್ತರಪತ್ರಿಕೆಯ ಮೇಲೆ ಯಾವುದೇ ಕಚ್ಚಾ ಕಾರ್ಯ(Rough work) ಮಾಡಬಾರದು ಹಾಗೂ ಯಾವುದೇ ಅಭ್ಯಾಸದ ಹಾಳೆಯನ್ನು(work sheet) ಓ.ಎಂ.ಆರ್. ಜೊತೆ ಲಗತ್ತಿಸಬಾರದು.

37. ಅಭ್ಯರ್ಥಿಯು ಪರೀಕ್ಷಾ ಕೊಠಡಿಯೊಳಕ್ಕೆ ಉತ್ತರಿಸಲು ಬೇಕಾದ ನೀಲಿ ಅಥವಾ ಕಪ್ಪು ಶಾಯಿಯ ಬಾಲ್‌ಪಾಯಿಂಟ್ ಪೆನ್ ಮತ್ತು ಗಣಿತಕ್ಕೆ ಸಂಬಂಧಿಸಿದ ಜಾಮೀಟ್ರಿ ಪರಿಕರಗಳನ್ನು ಮಾತ್ರವೇ ಪ್ರವೇಶ ಪತ್ರದೊಂದಿಗೆ ತೆಗೆದುಕೊಂಡು ಹೋಗಲು ಅವಕಾಶವಿರುತ್ತದೆ.

38. ಕ್ಯಾಲ್‌ಕ್ಯುಲೇಟರ್, ಲಾಗ್‌ಟೇಬಲ್, ಮೊಬೈಲ್, ಪೇಜರ್, ಬ್ಲೂಟೂತ್, ಇತರೆ ವಿದ್ಯುನ್ಮಾನ ವಸ್ತುಗಳನ್ನು ಹಾಗೂ ಬಿಳಿ ಫ್ಲೂಯಿಡ್, ಬ್ಲೇಡ್, ಬೆಂಕಿಪೊಟ್ಟಣ ಅಥವಾ ಸಿಗರೇಟ್ ಲೈಟರ್ ಮುಂತಾದ ವಸ್ತುಗಳನ್ನು ಪರೀಕ್ಷಾ ಕೊಠಡಿಯೊಳಗೆ ತರುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

39. ಯಾವುದೇ ಅಭ್ಯರ್ಥಿಯು ನಕಲು ಮಾಡುವುದು ಅಥವಾ ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ಬೇರೆ ಅಭ್ಯರ್ಥಿಗೆ ನೀಡಲು ಪ್ರಯತ್ನಿಸುವುದು, ಮುಂತಾದ ಪರೀಕ್ಷಾ ಅಕ್ರಮಗಳನ್ನು ಪರೀಕ್ಷಾ ಕೊಠಡಿಯಲ್ಲಿ ಕಡ್ಡಾಯವಾಗಿ ನಿಷೇಧಿಸಿದೆ.

40. ಪ್ರತಿ ಅಭ್ಯರ್ಥಿಯು ಮುಖ್ಯ ಅಧೀಕ್ಷಕರು ಅಥವಾ ಕೊಠಡಿ ಮೇಲ್ವಿಚಾರಕರು ನೀಡಿದ ಸೂಚನೆಗಳಿಗೆ/ ನಿಯಮಗಳಿಗೆ ಬದ್ಧರಾಗಿರಬೇಕು ಹಾಗೂ ಅಭ್ಯರ್ಥಿಗಳ ಬಗ್ಗೆ ಏನಾದರೂ ಹೆಚ್ಚಿನ ಮಾಹಿತಿಯನ್ನು ಮುಖ್ಯ

ಅಧೀಕ್ಷಕರು ಅಥವಾ ಕೊಠಡಿ ಮೇಲ್ವಿಚಾರಕರು ಪಡೆಯಬಯಸಿದಲ್ಲಿ ಅಭ್ಯರ್ಥಿಗಳು ಆ ಮಾಹಿತಿಯನ್ನು ನೀಡಲು ಸಿದ್ಧರಿರಬೇಕು.

41. ಪರೀಕ್ಷಾ ಕೊಠಡಿಯಲ್ಲಿ ನಿಶ್ಯಬ್ಧತೆ, ಶಿಸ್ತು, ಪರೀಕ್ಷಾ ಗೌಪ್ಯತೆ, ಪರೀಕ್ಷಾ ಸೂಚನೆ / ನಿಯಮಗಳನ್ನು ಪಾಲಿಸುವಲ್ಲಿ ವಿಫಲರಾದರೆ ಅಥವಾ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

## ವಿಶೇಷ ಚೇತನ ಅಭ್ಯರ್ಥಿಗಳಿಗೆ ಸೂಚನೆಗಳು

42. ವಿಶೇಷಚೇತನ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಪ್ರತ್ಯೇಕ ಕೊಠಡಿಯಲ್ಲಿ ಆಸನ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

43. ವಿಶೇಷಚೇತನ ಅಭ್ಯರ್ಥಿಯ ಅಂಗವಿಕಲತೆಯ ಪ್ರಮಾಣಪತ್ರವನ್ನಾಧರಿಸಿ ಪರೀಕ್ಷೆ ಬರೆಯಲು ಪ್ರತಿ ಒಂದು ಗಂಟೆಗೆ 20 ನಿಮಿಷಗಳಂತೆ ಗರಿಷ್ಠ 50 ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು. ಆನ್‌ಲೈನ್ ಅರ್ಜಿಯಲ್ಲಿ ಸಹಾಯಕ ಬರಹಗಾರರ (Scribe) ನ್ನು ಕೋರಿರುವ ಅಭ್ಯರ್ಥಿಯು ಪರೀಕ್ಷಗೆ ಒಂದು ದಿನ ಮೊದಲು ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ಸಹಾಯಕ ಬರಹಗಾರರ (Scribe) ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

25/9/2020

ವಿಶೇಷಾಧಿಕಾರಿಗಳು
ಕೇಂದ್ರೀಕೃತ ದಾಖಲಾತಿ ಘಟಕ